# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 286

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ. ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 17-12-2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಇತಿಹಾಸ ಕಂಡರಿಯದ ದೊಡ್ಡ ಮಟ್ಟದ ಪ್ರವಾಹ ಉಂಟಾಗಿ ಇಡೀ ಜಿಲ್ಲೆಯ ಜನ ಜೀವನವೇ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದ್ದಲ್ಲದೆ ತೋಟಗಾರಿಕೆ ಬೆಳೆಗಾರರಿಗೆ ಅತ್ಯಂತ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಜಿಲ್ಲೆಯಲ್ಲಿ ಈ ಮಳೆ ಹಾನಿಯಿಂದಾಗಿ ತೋಟಗಾರಿಕೆ ಬೆಳೆಗಾರರಿಗೆ ಆಗಿರುವ ನಷ್ಟದ ಒಟ್ಟು ಅಂದಾಜು ಮೊತ್ತವೆಷ್ಟು; | ಗಮನಕ್ಕೆ ಬಂದಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಮಳೆ ಹಾನಿಯಿಂದಾಗಿ ಒಟ್ಟು 24.61 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 219 ಜನ ತೋಟಗಾರಿಕೆ ಬೆಳೆಗಾರರಿಗೆ ಆಗಿರುವ ನಷ್ಟದ ಒಟ್ಟು ಅಂದಾಜು ಮೊತ್ತ ರೂ. 78.13 ಲಕ್ಷಗಳು. |
| ಆ | ಸರ್ಕಾರ ಸದರಿ ಮಳೆ ಹಾನಿ ಪರಿಹಾರದ ಪೂರ್ಣ ಮೊತ್ತವನ್ನು ಈಗಾಗಲೇ ಬಿಡುಗಡೆಗೊಳಿಸಿದೆಯೇ;<br>ಇಲ್ಲದಿದ್ದಲ್ಲಿ ಇನ್ನೂ ಬಾಕಿ ಇರುವ ಪರಿಹಾರದ ಹಣದ ಮೊತ್ತವೆಷ್ಟು; ತೋಟಗಾರಿಕೆ ಬೆಳೆಗಾರರ ಸಂತ್ರಸ್ತ ಜನರಿಗೆ ಸರ್ಕಾರ ಕಲ್ಪಿಸಿರುವ ಪರಿಹಾರ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಹೌದು.<br><br>1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿಯಿಂದಾಗಿ 24.61 ಹೆಕ್ಟೇರ್ ತೋಟಗಾರಿಕೆ ಬೆಳೆ ಪ್ರದೇಶ ಸೇರಿದಂತೆ ಒಟ್ಟು 86.00 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಒಟ್ಟು 247 ಫಲಾನುಭವಿಗಳಿಗೆ ರೂ.8,10,773/- ಗಳ ಪರಿಹಾರವನ್ನು ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಹಾನಿಗಳಿಗೆ ಪಾವತಿಸಬಹುದಾದ ಪರಿಹಾರ ಮೊತ್ತದ ಕುರಿತು ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ: 11.07.2023 ರಂದು ಹೊರಡಿಸಿರುವ NDRF/STRF ಮಾರ್ಗಸೂಚಿಗಳನ್ವಯ ರೈತರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗಳಿಗೆ DBT ಮುಖಾಂತರ ಕಂದಾಯ ಇಲಾಖೆಯಿಂದ ಜಮೆ ಮಾಡಲಾಗಿದೆ.<br><br>2. ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ (RWBCIS) ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಗೆ ಅಡಿಕೆ ಹಾಗೂ ಕಾಳುಮೆಣಸು ಬೆಳೆಗಳು ಅನುಸೂಚಿತ ಬೆಳೆಗಳಾಗಿದ್ದು, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಗೆ |

| | | |
|---|---|---|
| | | ಮಾರ್ಗಸೂಚಿಯನ್ವಯ ಪರಿಹಾರವನ್ನು ಸದರಿ ಯೋಜನೆಯಡಿ ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 1,01,148 ಹೆಕ್ಟೇರ್ (94342 ಪ್ರಸ್ತಾವನೆಗಳು) ಅಡಿಕೆ ಬೆಳೆ ಹಾಗೂ 36,641 ಹೆಕ್ಟೇರ್ (37677 ಪ್ರಸ್ತಾವನೆಗಳು) ಕಾಳುಮೆಣಸು ಬೆಳೆ ಸದರಿ ಯೋಜನೆಯಡಿ ಬೆಳೆ ವಿಮೆಗೆ ಒಳಪಟ್ಟಿರುತ್ತವೆ.<br><br>**ವಿಮಾ ಮೊತ್ತ :**<br>ಕಾಳುಮೆಣಸು ರೂ - 47000/-ಹೆ<br>ಅಡಿಕೆ ರೂ -128000/-ಹೆ<br><br>**ಪ್ರೀಮಿಯಂ ಮೊತ್ತ**:<br>ರೈತರವತಿಯಿಂದ ಪಾವತಿಸ ಬೇಕಾದ ಮೊತ್ತ<br>ಕಾಳು ಮೆಣಸು - ರೂ 2350/-ಹೆ<br>ಅಡಿಕೆ - ರೂ 6400/-ಹೆ<br><br>3. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಬೆಳೆಗಳ ಪ್ರದೇಶ ವಿಸ್ತರಣೆಗೆ ಕೆಳಕಾಣಿಸಿದಂತೆ ಸಹಾಯಧನ ಒದಗಿಸಲಾಗುತ್ತಿದೆ:-<br><br>a) ಕಾಳು ಮೆಣಸು (ಶೇ 40 ರಂತೆ, ರೂ 20,000/ಹೆ; ಗರಿಷ್ಟ 2 ಹೆ)<br>b) ಗೇರು(ಶೇ 40 ರಂತೆ, ರೂ 12,000/ಹೆ; ಗರಿಷ್ಟ 2 ಹೆ)<br>c) ಕೋಕೋ(ಶೇ 40 ರಂತೆ, ರೂ 12,000/ಹೆ; ಗರಿಷ್ಟ 2 ಹೆ)<br><br>4. ಕಾಳು ಮೆಣಸು ಮತ್ತು ಗೇರು ಬೆಳೆಗಳ ಪುನಃಶ್ಚೇತನಕ್ಕೆ- ಶೇ. 50 ರಂತೆ, ರೂ 20,000 ಪ್ರತಿ ಹೆಕ್ಟೇರ್ ಗೆ, ಗರಿಷ್ಟ 2 ಹೆಕ್ಟೇರ್ ಗೆ.<br><br>5. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (MGNREGA) ಅಡಿಕೆ ಪ್ರದೇಶ ವಿಸ್ತರಣೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರತಿ ಹೆಕ್ಟೇರ್ ಗೆ ಘಟಕ ವೆಚ್ಚ ರೂ.1,80,178 (ಸಾಮಗ್ರಿ: ರೂ.30,684+ಕೂಲಿ:ರೂ.1,49,494) ಇರುತ್ತದೆ. |
| ಇ | ಬಾಕಿ ಇರುವ ಪರಿಹಾರದ ಹಣವನ್ನು ಯಾವ ಕಾಲಮಿತಿಯೊಳಗೆ ಬಿಡುಗಡೆಗೊಳಿಸಲಾಗುವುದು? | ಬಾಕಿ ಇರುವ ಪರಿಹಾರದ ಹಣವನ್ನು ಕಂದಾಯ ಇಲಾಖೆಯಿಂದ ಪಾವತಿ ಮಾಡಲಾಗಿರುತ್ತದೆ. |

**HORTI 547 HGM 2024(E)**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು**